# ನವಿಲುಗನ್ನಡಿ

- ಜ್ಞಾನಪೀಠ ಪುರಸ್ಕೃತ ಹಿಂದಿಯ ವಿನೋದ ಕುಮಾರ ಶುಕ್ಲ ಅವರೊಂದಿಗಿನ ಸಂದರ್ಶನ (ನಾಗ ಎಚ್. ಹುಬ್ಳಿ) ಓದುಗರೇ ಅವರೊಡನೆ ಮಾತಾನಾಡಿದಷ್ಟು ಹತ್ತಿರವಾಗಿಸಿತು. ಅವರ ವಿಚಾರಗಳು ಚಿಂತನಾಧಾರೆ ಅತ್ಯಮೂಲ್ಯ.

**ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ, ಹೊಸಪೇಟೆ**

- ಚನ್ನಪ್ಪ ಅಂಗಡಿ ಅವರ ಲೇಖನಿಯಿಂದ ಮೂಡಿಬಂದ ಗಿರಿಜವ್ವನ ಮಗ ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಮಾಗಿದ ಬದುಕು– ಬರಹ 'ಜೀವನ ಪ್ರೀತಿ ಜಿನುಗಿ ಕಾವ್ಯವಾಗಿ ಬದುಕಾಗಿ' ಹೃದಯಕ್ಕೆ ಬಲು ಆಪ್ತವಾಯಿತು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಅವರ ತರಗತಿಗೆ ಪಾಠ ಕೇಳಲು ಹೋಗುತ್ತಿದ್ದ ದಿನಗಳು ನೆನಪಾದವು. ನೆನಪಿನ ಬುತ್ತಿಯ ಕೆಲ ಸವಿ ತುತ್ತುಗಳನ್ನು ಉಣಿಸಿದ ಲೇಖಕರು ಹಾಗೂ ಮಯೂರಕ್ಕೆ ಧನ್ಯವಾದಗಳು.


**ಇಂದಿರಾ ಮೋಟೆಬೆನ್ನೂರ, ಬೆಳಗಾವಿ**

- ರೂಪ ಹಾಸನ ಅವರ 'ವಿಜಯಾ ದಬ್ಬೆ: ಸದಾ ಉಳಿವ ಕಾವು ಬೆಳಕು' ಲೇಖನ ನಮ್ಮ ಗುರುಗಳಾಗಿದ್ದ ವಿಜಯಾ ದಬ್ಬೆಯವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ. ಮೈತುಂಬಾ ಸೆರಗು ಹೊದ್ದು ಪಾಠ ಮಾಡಲು ಬರುತ್ತಿದ್ದ ಮೆಲು ಮಾತಿನ ಆ ವಾಮನಮೂರ್ತಿ ಪ್ರಗತಿಪರ ಸ್ತ್ರೀ ಆಂದೋಲನದ ನೇತಾರರಾಗಿದ್ದರೆಂದು ನಮಗೆ ಗೊತ್ತೇ ಇರಲಿಲ್ಲ. ಸ್ನಾತಕೋತ್ತರ ಪದವಿ ಆರಂಭದಲ್ಲಿ ನಮಗೆ ಕನ್ನಡ ಅಕ್ಷರ ಮಾಲೆ ಬರೆಯಲು ಹೇಳಿ ನಮ್ಮ ಅಹಂ ಅನ್ನು ಇಳಿಸಿದ ಅವರ ಪಾಠದ ಶೈಲಿ ಮರೆಯಲು ಅಸಾಧ್ಯ.

**ವಾ. ಮುರಳೀಧರ, ತೀರ್ಥಹಳ್ಳಿ**

- 'ಕಾಡಿಗೆ ಕಣ್ಣು' ಅಂಕಣದಲ್ಲಿ ಲೇಖಕ ಕಲೀಮ್ ಉಲ್ಲಾ ಅವರ ಮಲೆದಾಸ ಮುಂಗಟ್ಟೆಯ ಜೀವನ ವಿಧಾನದ ನಿರೂಪಣೆ ಅನುಪಮವಾಗಿತ್ತು. ಮನುಷ್ಯನು ಇನ್ನೂ ತಿಳಿಯಲಾರದ ಜೀವ ವೈವಿಧ್ಯದ ವಿಸ್ಮಯಗಳು ಬಹಳ ಇರುವುದರಿಂದ ಪರಿಸರ ಸಂರಕ್ಷಣೆಯು ಅಪಾರ ಮಹತ್ವವನ್ನು ಪಡೆದುಕೊಂಡಿದೆ.

**ರವಿ ಯಲಿಗಾರ, ಮುನವಳ್ಳಿ**




- 'ಕಳೆದು ಹೋದ ಮಗು' ಕಥೆ (ಅನುವಾದ: ಸೊಂದಲಗೆರೆ ಲಕ್ಷ್ಮೀಪತಿ) ಹೃದಯಸ್ಪರ್ಶಿಯಾಗಿದೆ. 'ಹೊಳಪು' ಕಥೆಯಲ್ಲಿ ಲಾಮೂ ಅವರಂಥ ಅಧಿಕಾರಿಗಳು ಶಿಕ್ಷಣ ಇಲಾಖೆಯಲ್ಲಿದ್ದರೆ ಆ ಕ್ಷೇತ್ರ ಉದ್ಧಾರವಾಗುವುದರಲ್ಲಿ ಸಂಶಯವಿಲ್ಲ.

**ಬಾ.ರಂ. ಸುರೇಶ್, ತುಮಕೂರು**

- ಡಿ.ಎನ್.ಶ್ರೀನಾಥ್ ಅವರ ಅನುವಾದಿತ ಕಥೆ 'ಹೊಳಪು' ಶಿಕ್ಷಣ ಇಲಾಖೆಯಲ್ಲಿನ ಶಿಕ್ಷಕನ ಕೌಟುಂಬಿಕ ಸಮಸ್ಯೆ ಹೇಗೆ ಅವನ ವೃತ್ತಿಯನ್ನೇ ಹಿಂಡುತ್ತದೆ ಎಂದು ತೋರಿಸಿಕೊಡುತ್ತದೆ. ಅಲ್ಲದೆ ಆದರ್ಶ ಶಿಕ್ಷಕ ಲಾಮೂ ಭಾಯಿ ವ್ಯಕ್ತಿತ್ವವನ್ನು ಅನಾವರಣ ಮಾಡುತ್ತದೆ.

**ಎಸ್.ಆರ್. ನರಸಿಂಹ ಪ್ರಸಾದ್, ಕುಣಿಗಲ್**

- ವಿಜಯಾ ಮೋಹನ್ ಅವರ 'ಹೆಸರು' ಕಥೆ ಓದಿದಾಗ ನಮ್ಮೂರ ಹಲವರ ಚಿತ್ರಣ ಕಣ್ಣೆದುರು ಬಂದಂತೆನಿಸಿತು. ಊರಲ್ಲಿ ಉಳ್ಳಾಡುವಷ್ಟು ಜಮೀನು ಇದ್ದು, ಮೂರು ಕಾಸು ದುಡಿಯಲು ನಗರದ ಕಡೆ ವಾಲುತ್ತಿರುವವರ ಬಗ್ಗೆ ಕನಿಕರ ಹುಟ್ಟಿತು.

**ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ**